ಕಥೆ

# ಎಂಟನೇ ಮೈಲಿ



**ವಿನಾಯಕ ಅರಳಸುರಳಿ**

ಕಲೆ: ಸಂತೋಷ್ ಸಸಿಹಿತ್ಲು

ಶಿವಮೊಗ್ಗ ದಾಟಿದ್ದೇ ನವಾಬನ ಕುದುರೆಯಂತಾದ 'ಶಿವ ಶಕ್ತಿ ಸ್ಲೀಪರ್' ಬಸ್ಸಿಗೆ ಮತ್ತೂ ಉತ್ತೇಜನ ಕೊಡುವಂತೆ ಅದರ ಆಕ್ಸಿಲೇಟರನ್ನು ಜೋರಾಗಿ ಅದುಮಿದ ಜಬ್ಬರ್. ಹೆದ್ದಾರಿಯ ಕತ್ತಲು ಮೆತ್ತಿದ್ದ ರಸ್ತೆಯಲ್ಲಿ ವಾಹನಗಳು ಕುಸಿದು ಬೀಳುತ್ತಿರುವ ತಾರೆಗಳಂತೆ ಮಿನುಗುತ್ತಾ ಸಾಗುತ್ತಿದ್ದವು. ಬ್ರೇಕಿನ ಅಗತ್ಯವಿಲ್ಲದ ಸರಾಗ ದಾರಿಯಲ್ಲಿ ಪಂಜಿನ ಮೆರವಣಿಗೆ ಹೊರಟಂತೆ ಕಗ್ಗತ್ತಲ ನಡುನಡುವೆ ಚುಕ್ಕೆಗಳಾಗಿ ಓಡುತ್ತಿದ್ದ ಅವುಗಳ ಮಧ್ಯೆ ತಾನೂ ಒಂದು ಚುಕ್ಕೆಯಂತೆ ಧಾವಿಸುತ್ತಿದ್ದ ಶಿವಶಕ್ತಿಯ ಸ್ಟೇರಿಂಗನ್ನು ತನ್ನ ಪುಟಾಣಿ ಮಗ ಆಸೀಫನ ಕೈಯೆಂಬಂತೆ ಬಲವಾಗಿ ಹಿಡಿದುಕೊಂಡು ಮುನ್ನಡೆಸುತ್ತಿದ್ದ ಜಬ್ಬರ್ 'ಯುಹಿ ಚಲಾ ಚಲ್ ರಾಹಿ ಯುಹಿ ಚಲಾ' ಹಾಡಿನ ಧಾಟಿಯಲ್ಲಿ ಸೀಟಿ ಹೊಡೆದ. ಶಿವಶಕ್ತಿಯಾದರೂ ಅವನ ಹಾಡಿಗೆ 'ದುಂದುಂತಾದನ ರಪಬಂಬ' ಎಂದು ಕೋರಸ್ ಹಾಡುವಂತೆ ರಾಗವಾಗಿ ಘರ್ಜಿಸುತ್ತಾ ಕತ್ತಲನ್ನು ಸೀಳಿಕೊಂಡು ಮುಂದಕ್ಕೋಡಿತು. ಮುಂದಿನ ಏಳು ಗಂಟೆಗಳುದ್ದಕ್ಕೆ ಹಬ್ಬಿಕೊಂಡಿರುವ ರಾತ್ರಿಯನ್ನು ಹೀಗೇ ಎರಡೇ ಸಾಲಿನ ಪಲ್ಲವಿಗಳ ಸೀಟಿಯಲ್ಲಿ, ಯಾಹ್... ಎನ್ನುವ ಆಕಳಿಕೆಗಳಲ್ಲಿ, ಥಟ್ಟನೆ ತುಳಿಯುವ ಬ್ರೇಕಿನಲ್ಲಿ, ಸರಸರ ಸ್ಟೇರಿಂಗ್ ತಿರುಗಿಸಿ ಹಿಂದೆ ಮಲಗಿರುವ ಪ್ರಯಾಣಿಕರನ್ನೂ, ಯಾರೋ ಬಿಟ್ಟು ಹೋದ ಅನಾಥ ನೀರಿನ ಬಾಟಲಿಗಳನ್ನೂ ಆಚೆ ತುದಿ, ಈಚೆ ತುದಿಗೆ ಉರುಳಾಡಿಸುವ ತಿರುವುಗಳಲ್ಲಿ ಕಳೆಯುವುದಕ್ಕೆ ಬೇಕಾದ ಚೈತನ್ಯವೊಂದನ್ನು ಅವನು ಆ ಹಾಡಿನ ಮೂಲಕ ಆವಾಹಿಸಿಕೊಳ್ಳುತ್ತಿದ್ದ. ಇಷ್ಟು ಹೊತ್ತು ತೀರ್ಥಹಳ್ಳಿ, ಶಿವಮೊಗ್ಗ ಸ್ಟ್ಯಾಂಡುಗಳಲ್ಲಿ "ಬೆಂಗ್ಳೂರ್ ಬೆಂಗ್ಳೂರ್... ಜಾಲಹಳ್ಳಿ, ಕಲಾಸಿಪಾಳ್ಯ, ಜಯನಗರ್... ಯಾರ್ರೀ ಯಾರ್ರೀ ಬೆಂಗ್ಳೂರ್... ಬನ್ರೀ ಅಕ್ಕ, ಅಣ್ಣ ಡೈರೆಕ್ಟ್ ಬೆಂಗ್ಳೂರ್" ಎಂದು ಕೈಲಾಶ್ ಖೇರನಷ್ಟೇ ರಾಗವಾಗಿ ಪ್ರಯಾಣಿಕರನ್ನು ಕರೆದೂ ಕರೆದೂ ಸುಸ್ತಾಗಿದ್ದ, ಮಲ್ಲೇಸರ ತಮಿಳು ಮೂಲದ ಹುಡುಗ ನಲ್ಲತಂಬಿ ಪಕ್ಕದ ಸೀಟಿನಲ್ಲಿ ತೂಕಡಿಸುತ್ತಾ ಕುಳಿತಿದ್ದ. ಇನ್ನರ್ಧ ಗಂಟೆಯ ತನಕ ಅದೂ ಇದೂ ಮಾತಾಡುತ್ತಾ ತನ್ನ ಎಚ್ಚರಕ್ಕೆ ಸಾಥ್ ಕೊಡುವ ಅವನೂ ನಂತರ ಹ್ಯಾ... ಹಚೀ ಎಂದು ಆಕಳಿಸಿ ಮಲಗಿಬಿಡುತ್ತಾನೆ. ಆಮೇಲೇನಿದ್ದರೂ ತಾನುಂಟು, ಓಡುವ ಶಿವಶಕ್ತಿ ಬಸ್ಸುಂಟು. ಅಲ್ಲೆಲ್ಲೋ ದೂರದಲ್ಲಿ ಎದೆಯ ತುಂಬಾ ದೀಪ ಹಚ್ಚಿಕೊಂಡು ನಿಂತಿರುವ ಮಹಾನಗರಿ ತನ್ನನ್ನೂ, ತನ್ನ ಶಿವಶಕ್ತಿಯನ್ನೂ, ಆಕಳಿಸುವ ತಂಬಿಯನ್ನೂ, ಬಸ್ಸಿನ ಸದ್ದಿಗೆ ತಮ್ಮ ಗೊರಕೆಯನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸುತ್ತಾ ಮಲಗಿರುವ ಪ್ರಯಾಣಿಕರನ್ನೂ ಇಡಿಯಿಡಿಯಾಗಿ ನುಂಗುವ ತನಕ ತಾನು ಹೀಗೆ ಎದ್ದೇ ಇರಬೇಕು. ನಂತರ ಬಸ್ಸು ಹತ್ತಿದ ಕಟ್ಟಕಡೆಯ ಪ್ರಯಾಣಿಕನೂ ಇಳಿದು ತನ್ನ ಭಾಗ್ ದೌಡ್ ಭರೀ ಹಗಲಿನೊಳಕ್ಕೆ ನಡೆದುಹೋದ ಬಳಿಕವಷ್ಟೇ ತನ್ನ ನಿದ್ರೆ ಶುರುವಾಗುತ್ತದೆ!

ನವೆಂಬರಿನ ನಸುಚಳಿಯ ಕುಳಿರ್ಗಾಳಿ ಡ್ರೈವರ್ ವಿಂಡೋದಿಂದ ಸುಯ್ಯೆಂದು, ಅವನನ್ನು ಸೋಲಿಸಲೆಂಬಂತೆ ಬೀಸುತ್ತಿತ್ತು. ಇನ್ನೊಂದು ಗಂಟೆ